

## ಕಳೆದ ಸಂಚಿಕೆಯಲ್ಲಿ

**ರಿತಿಕ್–ಸುಗಂಧಾ ದೈಹಿಕ ಸಂಬಂಧ ಬೆಳೆಸಿದಾಗ ಗರ್ಭ ಧರಿಸುವ ಬಗ್ಗೆ ಸುಗಂಧಾ ಹೆದರುತ್ತಾಳೆ. ಈ ವಿಚಾರವಾಗಿ ವೈದ್ಯರ ಬಳಿ ರಿತಿಕ್ ಮಾತನಾಡಿ ಈ ಸಂಬಂಧದ ಬಗ್ಗೆ ತಿಳಿಸಿದ್ದನ್ನು ಸುಗಂಧಾ ಕೊಂಡಾಡುತ್ತಾಳೆ. ಒಂದು ವಾರದ ನಂತರ ರಿತಿಕ್ ಹೊಸ ಮನೆ ಖರೀದಿಸುವ ಬಗ್ಗೆ ಸುಗಂಧಾ ಜೊತೆ ಚರ್ಚಿಸುತ್ತಾನೆ. ಹೌಸಿಂಗ್ ಬೋರ್ಡ್ ಕಾಲೊನಿಯಲ್ಲಿ ಹೊಸ ಮನೆಯನ್ನು ಜಂಟಿ ಖಾತೆಯಲ್ಲಿ ಖರೀದಿಸುತ್ತಾರೆ. ಮನೆಯ ರಿಜಿಸ್ಟ್ರೇಷನ್ ಸಮಯದಲ್ಲಿ ನೋಟರಿ, ರಿತಿಕ್–ಸುಗಂಧಾ ಪತಿ ಪತ್ನಿಯರಲ್ಲವೇ ಎಂದು ಕೇಳುತ್ತಾ ಹಾಗೇ ರಿಜಿಸ್ಟ್ರೇಷನ್ ಮಾಡಬೇಕು. ಇಲ್ಲವಾದಲ್ಲಿ ಮುಂದೆ ಕಾನೂನು ತೊಡಕಾಗುವ ಸಾಧ್ಯತೆಯಿದೆ ಎಂದು ಸ್ಪಷ್ಟಪಡಿಸುತ್ತಾರೆ. ನೋಟರಿ ಮಾತಿಗೆ ಇಬ್ಬರೂ ಒಪ್ಪಿಗೆ ಸೂಚಿಸುತ್ತಾರೆ.**

ಹೆಚ್ಚಿಸಲು ಬಯಸುತ್ತಿರಲಿಲ್ಲ. ಅಕ್ಕ ನಮ್ಮೊಂದಿಗೆ ನಾಲ್ಕು ದಿನಗಳಿದ್ದು ಹೊರಟು ಹೋಗಿದ್ದರು. ಆ ನಾಲ್ಕು ದಿನಗಳಲ್ಲಿ ನಾನು ಎರಡು ದಿನ ರಜ ಹಾಕಿದ್ದೆ. ರಿತಿಕ್ ನಾಲ್ಕು ದಿನಗಳೂ ರಜ ಹಾಕಿದ್ದ. ಅವನು ಮಾಡಿದ್ದು ಉಚಿತವೇ ಆಗಿತ್ತು, ಅಕ್ಕ ಅವನ ಮನೆಯಲ್ಲಿರುವುದು ಅವಶ್ಯಕವಾಗಿತ್ತು.

ಅಕ್ಕ ಬಂದಿದ್ದಾಗ, ಒಂದು ದಿನ ಉಮಾ ವರ್ಮಾ, 'ಯಾರು ಬಂದಿದ್ದಾರೆ?' ಎಂದು ಕೇಳಿದ್ದರು.

'ಇವರ ಅಕ್ಕ' ನಾನು ಸಹ ಉಮಾರ ಶೈಲಿಯಲ್ಲಿಯೇ 'ಇವರ' ಶಬ್ದವನ್ನು ಉಚ್ಚಾರಣೆ ಮಾಡಿದ್ದೆ.

'ತಂಗಿಯೋ, ಅಕ್ಕನೋ?'

'ಅಕ್ಕ'

'ಎಲ್ಲಿದ್ದಾರೆ?'

'ನೋಯಿಡಾದಲ್ಲಿ'

'ಓಹ್, ನೋಯಿಡಾದಲ್ಲಿ ನನ್ನ ದೊಡ್ಡಪ್ಪ ಇದ್ದಾರೆ, ನಾನು ಅಕ್ಕನನ್ನು ಭೇಟಿಯಾಗ್ತೇನೆ', ಹೀಗೆಂದು ಉಮಾ ನನ್ನನ್ನು ಕಷ್ಟಕ್ಕೆ ಸಿಲುಕಿಸಿದ್ದರು. ಉಮಾ ಮತ್ತು ಅಕ್ಕ ಇಬ್ಬರು ಪರಸ್ಪರ ಭೇಟಿಯಾಗುವುದನ್ನು ನಾನು ಬಯಸುತ್ತಿರಲಿಲ್ಲ. ನಾನು ಇಬ್ಬರ ಭೇಟಿಯನ್ನು ಹೇಗೋ ಮಾಡಿ ತಡೆದಿದ್ದೆ.

ಈ ನಡುವೆ ಉಮಾ ವರ್ಮಾ ಅದೊಂದು ದಿನ ನನಗೆ 'ಕರವಾಚೌಥ' (ಗೌರಿ ವ್ರತ) ಬರುವುದರಲ್ಲಿದೆ ಎಂದು ನೆನಪಿಸಿದರು.

'ನೀವು ಕರವಾಚೌಥವನ್ನು ಆಚರಿಸುತ್ತೀರಾ?' ಉಮಾ ನನ್ನನ್ನು ಕೇಳಿದ್ದರು. ಸಂಯೋಗವೆಂಬಂತೆ, ಅದೇ ದಿನ, ಮಧ್ಯಾಹ್ನದ ಊಟದ ಬಿಡುವಿನಲ್ಲಿ ಕೀರ್ತಿ ಮತ್ತು ಮಿಸೆಸ್ ಕಶ್ಯಪ್‌ರೊಂದಿಗೆ ನಾನು ಕೂತಿದ್ದಾಗ ಕರವಾಚೌಥದ ಆಗಮನದ ಚರ್ಚೆ ಪ್ರಾರಂಭವಾಯಿತು. ಅವರಿಬ್ಬರು ಹೊಸ ಸೀರೆಗಳನ್ನು ಕೊಳ್ಳುವ ಯೋಜನೆ ರೂಪಿಸುತ್ತಿದ್ದರು.

'ನೀವು ಸಹ ಈ ಬಾರಿ ಕರವಾಚೌಥ್ ವ್ರತವನ್ನಿಟ್ಟುಕೊಳ್ಳಿ', ಮಿಸೆಸ್ ಕಶ್ಯಪ್ ನನಗೆ ಹೇಳಿದರು, ಈ ವ್ರತವನ್ನು ಜೀವನಸಂಗಾತಿಯ ದೀರ್ಘ ಆಯಸ್ಸಿಗೆ ಆಚರಿಸಲಾಗುತ್ತದೆ.'

'ಹೂಂ, ನೀನು ಸಹ ರಿತಿಕ್‌ನ ದೀರ್ಘ ಆಯಸ್ಸಿಗೆ ವ್ರತವನ್ನು ಆಚರಿಸು' ಕೀರ್ತಿ ಹೇಳಿದಳು.

'ಪಂಜಾಬಿನಲ್ಲಿ ವಿವಾಹ ನಿಶ್ಚಿತಗೊಂಡ ಕುಮಾರಿ ಹುಡುಗಿಯರು ಸಹ ಈ ವ್ರತವನ್ನು ಆಚರಣೆ ಮಾಡುತ್ತಾರೆ.'

'ಹೂಂ, ನೀನು ಸಹ ನಮ್ಮೊಂದಿಗೆ ಸೀರೆ ಕೊಳ್ಳಲು ಬಾ', ಮಿಸೆಸ್ ಕಶ್ಯಪ್ ಹೇಳಿದಾಗ ನಾನು ಮುಗುಳ್ನಕ್ಕೆ.

'ಅಂದು ಸಂಜೆಯೇ ಉಮಾ ಶರ್ಮಾ ನನ್ನನ್ನು, ನೀವು ಕರವಾಚೌಥ್ ವ್ರತವನ್ನು ಆಚರಿಸುತ್ತೀರೋ, ಇಲ್ಲವೋ ಎಂದು ಕೇಳಿದರು.

'ಹೂಂ, ಆಚರಿಸುತ್ತೇನಲ್ಲ', ನಾನು ಸುಳ್ಳು ಹೇಳಿದೆ.

'ಸರಿ, ನಾಳೆ ಪೂಜೆಯ ವೇಳೆಗೆ ನಿಮ್ಮನ್ನು ಕರೆಸಿಕೊಳ್ತೇನೆ, ನನ್ನ ಮನೆಯಲ್ಲಿ ವ್ರತವನ್ನು ಆಚರಿಸುತ್ತೇವೆ', ಉಮಾ ವರ್ಮಾ ಉತ್ಸಾಹದಿಂದ ಹೇಳಿದರು.

ನನಗೆ ಕರವಾಚೌಥದ ಬಗ್ಗೆ ಹಿಂದಿ ಚಿತ್ರಗಳಲ್ಲಿ ನೋಡಿದಷ್ಟು ಮಾತ್ರ ತಿಳಿವಳಿಕೆಯಿತ್ತು. ಹಿಟ್ಟು ಸ್ವಚ್ಛ ಮಾಡುವ ಜರಡಿಯಿಂದ ಚಂದ್ರನನ್ನು ನೋಡಿದ ನಂತರ ಗಂಡನ ಮುಖವನ್ನು ನೋಡುವ ಕ್ರಿಯೆ ನನಗೆಂದೂ ಅರ್ಥವಾಗಿರಲಿಲ್ಲ. ನಾನು ಸದಾ ಇವುಗಳ ಬಗ್ಗೆ ಗೇಲಿ ಮಾಡುತ್ತಿದ್ದೆ. ಆದರೆ ನಾನೀಗ ಅದನ್ನೇ ಮಾಡಲು ಹೋಗುತ್ತಿದ್ದೆ.

ಮರುದಿನ ನಾನು ಕೀರ್ತಿಯೊಂದಿಗೆ ಹೋಗಿ ಹೊಸ ಸೀರೆ ಮತ್ತು ಹೊಸ ಜರಡಿಯನ್ನು ಕೊಂಡು ತಂದೆ. ನಂತರ ಏನು ಮಾಡಬೇಕೆಂಬುದು ನನಗೆ ತಿಳಿದಿರಲಿಲ್ಲ

'ಉಪವಾಸ ಮಾಡಿದ್ದೀಯಲ್ಲ?' ಕೀರ್ತಿ ಕೇಳಿದ್ದಳು.

'ಹೌದು! ಮಾಡಿದ್ದೇನೆ' ಎಂದಿದ್ದೆ. ಆದರೆ ನಾನು ಉಪವಾಸ ಮಾಡುವುದನ್ನು ಮರೆತಿದ್ದೆ, ಇದು ವಾಸ್ತವಿಕತೆಯಾಗಿತ್ತು. ಅಂದು ನಾನು ಹೊಟ್ಟೆ ತುಂಬಾ ಊಟ ಮಾಡಿ ಕೀರ್ತಿಯ ಬಳಿಗೆ ಬಂದಿದ್ದೆ. ಅಂದು ಕಚೇರಿಯ ಎಲ್ಲಾ ಮಹಿಳೆಯರು 'ಐಚ್ಛಿಕ ರಜ'ದ ಮೇಲಿದ್ದರು. ಸೀರೆ ಮತ್ತು ಜರಡಿಯೊಂದಿಗೆ ಮರಳಿ ಬರುವಾಗ ಉಮಾ ವರ್ಮಾ ಅವರು ನನಗೆ, 'ಸಂಜೆ ಏಳು ಗಂಟೆಗೆ ನನ್ನ ಮನೆಯಲ್ಲಿ ಪೂಜೆಯನ್ನಿಟ್ಟುಕೊಂಡಿದ್ದೇವೆ. ನೀವು ಏಳು ಗಂಟೆಗೆ ಮೊದಲು ನಮ್ಮ ಮನೆಗೆ ಬಂದಿರಬೇಕು' ಎಂದು ಆಹ್ವಾನ ನೀಡಿದರು. ಸಂಜೆ ಏಳು ಗಂಟೆಗೆ! ರಿತಿಕ್‌ಗೆ ಏನು ಹೇಳುವುದು? ನನ್ನ ಈ ಮೂರ್ಖತನವನ್ನು ಅವನು ಯಾವ ರೂಪದಲ್ಲಿ ತೆಗೆದುಕೊಳ್ಳುವನೋ? ನನಗೆ ನನ್ನ ಮೇಲೆಯೇ ಸಿಟ್ಟು ಬಂತು. ನಾನೆಂಥ ಮೂರ್ಖತನ ಮಾಡಲು ಹೊರಟಿದ್ದೇನೆ? ಯಾವ ಚಂದ್ರನನ್ನು ಜರಡಿಯಿಂದ ನೋಡಲಾಗುವುದೋ, ಅದು ಪೃಥ್ವಿಯ ನಿರ್ಜೀವ, ಏರುತಗ್ಗಿನ ಒಂದು ಉಪಗ್ರಹ. ನನಗಿದೆಲ್ಲಾ ಗೊತ್ತಿದ್ದೂ, ಈ ಜಂಜಾಟದಲ್ಲಿ ಸಿಲುಕಿಕೊಳ್ಳಲು ಏಕೆ ಬಯಸುತ್ತಿದ್ದೇನೆ?

'ಅರೇ, ಇಷ್ಟೆಲ್ಲಾ ಶೃಂಗಾರವೇಕೆ? ಇವತ್ತು ನಾವೆಲ್ಲೂ ಹೋಗಬೇಕಿಲ್ಲವಲ್ಲ?' ರಿತಿಕ್ ನಾನು ಅಲಂಕಾರ ಮಾಡಿಕೊಳ್ಳುತ್ತಿರುವುದನ್ನು ನೋಡಿ ಕೇಳಿದ. ಅವನು ಕೇಳುವುದು ಸಹಜವಾಗಿತ್ತು. ಅಂದು ಸಂಜೆ ನಾವಿಬ್ಬರು ಎಲ್ಲೂ ಹೊರಗೆ ಹೋಗಬೇಕಿರಲಿಲ್ಲ.

'ಉಮಾ ಅವರ ಮನೇಲಿ ಒಂದು ಪೂಜೆಯಿದೆ. ಅವರು ಕರೆದಿದ್ದಾರೆ. ಬರಲ್ಲ ಅಂದರೆ ಅವರಿಗೆ ಕೆಡುಕು ಅನ್ನಿಸುತ್ತೆ'. ನಾನು 'ಕರವಾಚೌಥ'ದ ವಿಷಯವನ್ನು ಮರೆಮಾಚಿದೆ. ಆದರೆ ಈ ವಿಷಯ ಮರೆಮಾಚುವಂಥದ್ದಾಗಿರಲಿಲ್ಲ. ಉಮಾ ವರ್ಮಾ ಅವರ ಮನೆ ಅಂಗಳದಲ್ಲಿ ಕಾಲೊನಿಯ ಅನೇಕ ಮಹಿಳೆಯರು ಕಲೆತಿದ್ದರು. ಎಲ್ಲರೂ ಸೇರಿ ಡೋಲು ಬಾರಿಸಿ ಹಾಡು ಹಾಡಿದರು. ನಂತರ ಪೂಜೆ ಮಾಡಲಾಯಿತು. ಯಾರ ಪೂಜೆ ಮಾಡಲಾಯಿತು? ನನಗೆ ಅರ್ಥವಾಗಲಿಲ್ಲ. ಇಡೀ ವಾತಾವರಣ ಸಿನೆಮಾದಂತಿತ್ತು. ಅಲ್ಲಿಗೆ ಎಲ್ಲಾ ಮಹಿಳೆಯರು ಶೃಂಗಾರ ಮಾಡಿಕೊಂಡು ಬಂದಿದ್ದರು. ಇದು ಟೆಲಿ ಧಾರಾವಾಹಿಗಳ ಪ್ರಭಾವ ಸಹ ಆಗಿದ್ದಿರಬಹುದು.

ನಂತರ ಚಂದ್ರ ಮತ್ತು ಪತಿಯ ಮುಖವನ್ನು ನೋಡುವ ಸರದಿ ಬಂತು. ಎಲ್ಲರ ಪತಿಯರನ್ನು ಅಲ್ಲಿಗೇ ಕರೆಸಲಾಯಿತು. ಉಮಾ ರಿತಿಕ್‌ನನ್ನು ಸಹ ಕರೆಯಿಸಿದಳು. ಅಲ್ಲಿ ರಿತಿಕ್‌ನನ್ನು ನೋಡಿ ನನಗೆ ಆಕಾಶವೇ ತಲೆಯ ಮೇಲೆ ಕಳಚಿ ಬಿದ್ದಂತಾಯಿತು. ನಾನು ಇದೇನು ಮಾಡುತ್ತಿದ್ದೇನೆ? ರಿತಿಕ್ ಏನೆಂದು ಯೋಚಿಸಬಹುದು? ನಾನು ಗಾಬರಿಯಲ್ಲಿ ಪ್ರಜ್ಞೆ ಕಳೆದುಕೊಳ್ಳದಿದ್ದದ್ದು ನನ್ನ ಅದೃಷ್ಟವೇ ಆಗಿತ್ತು. ಅಲ್ಲಿ ರಿತಿಕ್ ಯಾವುದೇ ಪ್ರತಿಕೂಲ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಿಲ್ಲ. ನಾನು ಅವನನ್ನು ಜರಡಿಯಿಂದ ನೋಡಲು ಅನುಕೂಲವಾಗುವಂತೆ ಅವನು ನನ್ನೆದುರು ಬಂದು ನಿಂತ; ಆದರೆ ನಾನು ಅವನನ್ನು ನೋಡುವ ಧೈರ್ಯ ಮಾಡದಾಗಿದ್ದೆ.

ದೇವರ ಜಪದೊಂದಿಗೆ ಕರವಾಚೌಥ್ ಸಮಾರಂಭ ಮುಗಿಯಿತು. ನಾನು ರಿತಿಕ್‌ನೊಂದಿಗೆ ಮನೆಗೆ ಬಂದೆ.

'ಕರವಾಚೌಥದ ಪೂಜೆ ಇದೆ ಅಂತ ನೀನು ಹೇಳಿರಲಿಲ್ಲ', ರಿತಿಕ್ ಹೇಳಿದ.

'ಇದನ್ನು ಕೇಳಿ ನಿನಗೆ ಏನು ಅನ್ನಿಸುವುದೋ ಎಂದು ಯೋಚಿಸಿದ್ದೆ' ನಾನು ವಾಸ್ತವವನ್ನು ಒಪ್ಪಿಕೊಂಡೆ.

**(ಸಶೇಷ)**